ದಿನಾಂಕಃ 18.11.2021 ರಂದು ಈ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಸಿ.ಎನ್.ಕೆ. ವಕೀಲರಿಂದಃ ಪ್ರತಿವಾದಿ ಪರವಾಗಿಃ

ನನ್ನ ತಂದೆ ದಾಸಪ್ಪ ದಿನಾಂಕ 07.08.2016 ರಂದು ಮೃತಪಟ್ಟಿದ್ದಾರೆ. ನಮ್ಮ ಅಣ್ಣ ನಾಗರಾಜು ದಿನಾಂಕ 12.02.2018 ರಂದು ಮೃತಪಟ್ಟಿದ್ದಾರೆ. ನಮ್ಮ ತಂದೆಗೆ ಅಣ್ಣ ಬಾಣಯ್ಯ ಎಂದು ಇದ್ದರು. ನಮ್ಮ ತಂದೆಗೆ ಮೂರು ಜನ ಸಹೋದರಿಯರು ಇದ್ದಾರೆ ಎಂದರೆ ಸುಳ್ಳು. ಅವರ ಹೆಸರು ಕಂಬಮ್ಮ, ಮರಿಯಮ್ಮ ಮತ್ತು ತಿಮ್ಮಕ್ಕ ಎಂದರೆ ಸುಳ್ಳು. ಅವರು ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಗಂಡ ಮತ್ತು ಮಕ್ಕಳಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ತಂದೆಯ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇವೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ಸತ್ಯಾಂಶ ಗೊತ್ತಾಗುತ್ತದೆಂದು ವಂಶವೃಕ್ಷವನ್ನು ಹಾಜರು ಮಾಡಿಲ್ಲ ಎಂದರೆ ಸುಳ್ಳು. ನಮ್ಮ ದೊಡ್ಡಪ್ಪ ಮೃತಪಟ್ಟಿದ್ದು, ಅವರ ಹೆಂಡತಿ ಮಾಳಮ್ಮ ಎಂದರೆ ನಿಜ. ಅವರಿಗೆ ನಾಲ್ಕು ಜನ ಮಕ್ಕಳು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ದಿನಾಂಕ 22.10.2018 ರಂದು ನಮ್ಮ ತಾಯಿ ಕರಿಯಮ್ಮ ಮತ್ತು ನಮ್ಮ ದೊಡ್ಡಮ್ಮ ಮಾಳಮ್ಮ ರವರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ನಮ್ಮ ತಾಯಿ ಕರಿಯಮ್ಮ ಆರೋಗ್ಯವಾಗಿದ್ದಾರೆ. ಅವರು ನನ್ನ ಜೊತೆ ಇದ್ದಾರೆ. ವಿಭಾಗ ಪತ್ರದ ಬಗ್ಗೆ ಗೊತ್ತು ಎಂದರೆ ಸುಳ್ಳು. ಈ ವಿಷಯವನ್ನು ನಮ್ಮ ತಾಯಿ ತಿಳಿಸಿದ್ದಾರೆ ಎಂದರೆ ಸುಳ್ಳು.

ನಮಗೂ ಮತ್ತು ಪ್ರತಿವಾದಿಯರಿಗೂ ವಿಶ್ವಾಸ ಇಲ್ಲ ಎಂದರೆ ಸುಳ್ಳು. ಪ್ರತಿವಾದಿ 1 ರವರನ್ನು ಹೊರಗಡೆ ಇಟ್ಟು, ನಮ್ಮ ತಾಯಿ ಮತ್ತು ಸಹೋದರಿಯರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ನಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಕೊಟ್ಟರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕನಾಯಕನಹಳ್ಳಿ.